

# ಬುಗುಡಿ

**ಹಾಡುಹಕ್ಕಿಗೆ (ಹಮಿಂಗ್‌ಬರ್ಡ್) ಈ ಹೂವೆಂದರೆ ಎಲ್ಲಿಲ್ಲದ ಆಕರ್ಷಣೆ.**

ಚಿತ್ರ–ಬರಹ:
**ಕೃಷ್ಣ ಪ್ರಶಾಂತ್ ವಿ. ಗೇರುಕಟ್ಟೆ**

ಹಳದಿ ಬಣ್ಣದಿಂದ ಹೊಳೆಯುತ್ತಾ, ಚಿಟ್ಟೆಗಳ ಪಾಲಿಗೆ ಅಮೃತವಾಗಿರುವ ಈ ಹೂವಿನ ಹೆಸರು ಬುಗುಡಿ. ಅರಸಿನ ಹಳದಿ ಬಣ್ಣವನ್ನು ಹೊಂದಿರುವ ಈ ಹೂವು ಮೇಲ್ಭಾಗದ ಪದರದಲ್ಲಿ ಸಾಮಾನ್ಯವಾಗಿ ಐದು ದಳಗಳನ್ನು ಹೊಂದಿದ್ದು, ಕೆಳಗಿನ ಪದರದಲ್ಲಿ 5ಕ್ಕಿಂತ ಜಾಸ್ತಿ ದಳಗಳನ್ನು ಹೊಂದಿರುತ್ತದೆ. ಸಪೂರ ಹಾಗೂ  ನೀಳವಾದ ಹಸಿರು ತೊಟ್ಟನ್ನು ಹೊಂದಿದ್ದು, ದಾರದಲ್ಲಿ ಹೂವನ್ನು ಇಳಿಬಿಡಲಾಗಿದೆಯೋ ಎಂಬಂತೆ ಭಾಸವಾಗುತ್ತದೆ. ಬುಗುಡಿಯ ವೈಜ್ಞಾನಿಕ ಹೆಸರು ವಲ್ಲಾರಿಸ್ ಸೊಲನಾಯಾ. ಎಪೋಸಿನಾಸಿಯಾ ಸಸ್ಯ ಕುಟುಂಬಕ್ಕೆ ಸೇರಿದೆ. ಸಂಸ್ಕೃತದಲ್ಲಿ ಇದನ್ನು ಭದ್ರವಲ್ಲಿ ಎಂಬುದಾಗಿಯೂ ಕರೆಯುತ್ತಾರೆ.

ಬುಗುಡಿ ಹೂ ನೋಡಲು ಅತ್ಯಾಕರ್ಷವಾಗಿದ್ದು ಚಿಟ್ಟೆಗಳನ್ನು ತನ್ನೆಡೆ ಆಕರ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅಲ್ಲದೆ ಹಾಡುಹಕ್ಕಿ (ಹಮ್ಮಿಂಗ್ ಬರ್ಡ್)ಗೆ ಈ ಹೂವೆಂದರೆ ಎಲ್ಲಿಲ್ಲದ ಆಕರ್ಷಣೆ. ಸಾಮಾನ್ಯವಾಗಿ ಡಿಸೆಂಬರ್‌ನಿಂದ ಏಪ್ರಿಲ್ ತಿಂಗಳ ನಡುವಿನಲ್ಲಿ ಬುಗುಡಿ ಹೂ ಬಿಡುತ್ತದೆ. ವಿಭಿನ್ನ ರೀತಿಯ ಸುವಾಸನೆಯನ್ನು ಬೀರುವ ಬುಗುಡಿ ಗಾಯಗೊಂಡಾಗ ಬಿಳಿ ಬಣ್ಣದ ದ್ರವವನ್ನು ಸ್ರವಿಸುತ್ತದೆ. ಹೆಚ್ಚಾಗಿ ಹೂದೋಟಗಳಲ್ಲಿ ಅಲಂಕಾರಕ್ಕಾಗಿ ಬುಗುಡಿಯನ್ನು ಬೆಳೆಸಿರುತ್ತಾರೆ. ಮನೆಯಂಗಳದಲ್ಲಿ ಬುಗುಡಿಯಿದ್ದರೆ ಚಿಟ್ಟೆ, ಹಕ್ಕಿಗಳ ಆಗಮನವೂ ಹೆಚ್ಚಾಗುವುದಲ್ಲದೆ, ನೋಡಲೂ ಆನಂದ.

